# 1 ನೇ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮದ್ದೂರು

## ಕ್ರಿಮಿನಲ್ ಪ್ರಕರಣ ಸಂಖ್ಯೆ : 2182/2023

| | | |
|---|---|---|
| ಪಿರ್ಯಾದುದಾರರು | : | ಸೌಮ್ಯ ಎಸ್.ಆರ್.<br>ಬಿನ್ ರಾಮು ಎಸ್.ಕೆ., 38 ವರ್ಷ,<br>ವಾಸ : ಶಿವಳ್ಳಿ ಗ್ರಾಮ,<br>ದುದ್ದ ಹೋಬಳಿ,<br>ಮಂಡ್ಯ ತಾಲ್ಲೂಕು ಮತ್ತು ಜಿಲ್ಲೆ. |

**ವಿರುದ್ಧ**

| | | |
|---|---|---|
| **ಆರೋಪಿತರು -** | : | **ಶ್ರೀ.ರಾಮಣ್ಣ ಹೆಚ್.ಬಿ.**<br>**ಬಿನ್ ಪೂಜಾರಿ ಬೀರಯ್ಯ, 68 ವರ್ಷ,**<br>ವಾಸಃ ನಂ.2242, 1 ನೇ ತಿರುವು,<br>ಕುವೆಂಪು ನಗರ, ಪುಣ್ಯ ಆಸ್ಪತ್ರೆ ಹತ್ತಿರ,<br>ಚನ್ನಪಟ್ಟಣ ಟೌನ್, ರಾಮನಗರ ಜಿಲ್ಲೆ. |

**<u>ಆಪಾದನೆ</u>**

ಈ ಮೇಲ್ಕಂಡ ಆರೋಪಿಯಾದ ನೀವು ಪಿರ್ಯಾದಿಯವರಿಂದ ಕಾನೂನು ಬದ್ದ ಅವಶ್ಯಕತೆಗಾಗಿ ದಿನಾಂಕಃ25.04.2023 ರಂದು ರೂ.5,00,000/- ಹಣವನ್ನು ಸಾಲವಾಗಿ ಪಡೆದಿದ್ದು, ಸದರಿ ಹಣವನ್ನು ಮೂರು ತಿಂಗಳ ಒಳಗಾಗಿ ಮರು ಪಾವತಿಸುವುದಾಗಿ ಒಪ್ಪಿಕೊಂಡಿದ್ದು, ಹಣದ ಪಾವತಿಗಾಗಿ ನಿಮ್ಮ ಕೆನರಾ ಬ್ಯಾಂಕ್, ಚನ್ನಪಟ್ಟಣ ಶಾಖೆಯ ಚೆಕ್ ಸಂಖ್ಯೆ 178375 ಮೊತ್ತ 5,00,000/- ಹಣವನ್ನು ನಮೂದಿಸಿದ್ದು ದಿನಾಂಕಃ02.08.2023 ರಂದು ಬ್ಯಾಂಕಿನಿಂದ ಪಡೆದುಕೊಳ್ಳುವಂತೆ ಪಿರ್ಯಾದಿಗೆ ನೀಡಿದ್ದು, ಸದರಿ ಚೆಕ್ ಅನ್ನು ನಗದೀಕರಿಸಲು ಪಿರ್ಯಾದಿಯು ಬ್ಯಾಂಕ್ ಆಫ್ ಬರೋಡಾ, ಮದ್ದೂರು ಶಾಖೆಗೆ ಹಾಜರು ಪಡಿಸಿದಾಗ ಸದರಿ ಬ್ಯಾಂಕ್ ನವರು " **ಖಾತೆ ಮುಚ್ಚಿರುತ್ತದೆ** ” ಎಂಬ ಹಿಂಬರಹದೊಂದಿಗೆ ದಿನಾಂಕ 05.08.2023 ರಂದು ಸದರಿ ಚೆಕ್ ಅಮಾನ್ಯ

ಮಾಡಿದ್ದು, ಆ ಸಂಬಂಧ ಪಿರ್ಯಾದಿಯು ದಿನಾಂಕಃ19.08.2023 ರಂದು ನಿಮಗೆ ನೋಟಿಸ್ ಕಳುಹಿಸಿದ್ದು, ಸದರಿ ನೋಟಿಸ್ ನಿಮಗೆ ದಿನಾಂಕಃ 25.08.2023 ರಂದು ಖುದ್ದು ಜಾರಿಯಾಗಿದ್ದರೂ ಸಹ ನೀವು ಇದುವರೆವಿಗೂ ಹಣವನ್ನು ಪಾವತಿ ಮಾಡಿರುವುದಿಲ್ಲ. ಆ ಮೂಲಕ ಲಿಖಿತ ವರ್ಗಾವಣೆಗಳ ಅಧಿನಿಯಮ ಕಲಂ-138 ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುವುದಾಗಿ ನಿಮ್ಮ ವಿರುದ್ದ ಆರೋಪಿಸಲಾಗಿದೆ.

ಪ್ರಶ್ನೆ-1 ಃ ಈ ಮೇಲೆ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೇ ?

ಆರೋಪಿ ಉತ್ತರ ಃ

ಪ್ರಶ್ನೆ-2 ಃ ನೀವು ಆಪಾದನೆಯನ್ನು ಒಪ್ಪುಕೊಳ್ಳುತ್ತೀರಾ ಅಥವಾ ಏನಾದರೂ ಹೇಳುವುದಿದೇಯಾ?

ಆರೋಪಿ ಉತ್ತರ ಃ

( ಈ ಮೇಲ್ಕಂಡ ಆರೋಪಿತನ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ನನ್ನ ಸಮಕ್ಷಮ ದಿನಾಂಕಃ 12.06.2024 ರಂದು ಸಹಿ ಮಾಡಿರುತ್ತಾರೆ)

(ನಳಿನ ಎಸ್.ಸಿ.)
1 ನೇ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿ
ಮತ್ತು ಜೆಎಂಎಫ್‌ಸಿ ನ್ಯಾಯಾಲಯ,

**ಆರೋಪಿ ಸಹಿ ಃ**